ಆ ಬಾವಿಗಳಲ್ಲಿ ನೀರಿನ ಮಟ್ಟ ಜಾಸ್ತಿಯಾಗುತ್ತದೆ. ಈಗ ನನ್ನ ಕ್ಷೇತ್ರವಾದ ಸಂಡೂರಿನಲ್ಲಿ ಸಹ ನೀರಿನ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲ. ಆದ್ದರಿಂದ ನಾವು ಎಲ್ಲೆಲ್ಲಿ ಕೆರೆ ಮಾಡುತ್ತೇವೆ, ನೀರನ್ನು ನಿಲ್ಲಿಸುತ್ತೇವೆ ತಕ್ಷಣವೆ ಆ ಕೆರೆಗಳ ಕೆಳಗಡೆ ಎಲ್ಲಾ ಬಾವಿಗಳಲ್ಲಿ ನೀರಿನ ಮಟ್ಟ ಜಾಸ್ತಿಯಾಗುತ್ತದೆ. ಇದೊಂದೇ ಇದಕ್ಕೆ ಇರುವ ಪರಿಹಾರ.

ತಾಲ್ಲೂಕು ಪಂಚಾಯತಿ ನಿರ್ಣಯಗಳು

109 - ಶ್ರೀ ಎ. ಮಂಜು (ಅರಕಲಗೂಡು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪಂಚಾಯತಿ ಕಾರ್ಯನಿರ್ವಹಣ ಅಧಿಕಾರಿಯು ತಾಲ್ಲೂಕು ಪಂಚಾಯಿತಿಗಳು ಮಾಡಿದ ನಿರ್ಣಯವನ್ನು ಉಲ್ಲಂಘಿಸಬಹುದೆ?*

ಆ) *ಉಲ್ಲಂಘಿಸಿದಲ್ಲಿ ಅಂತಹವರ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಇಲ್ಲ. ಆದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 156 (2) ಮತ್ತು (3)ರನ್ವಯ, ತಾಲ್ಲೂಕು ಪಂಚಾಯತಿಗಳ ನಿರ್ಣಯಗಳು ಕಾನೂನಿನ ಉಪಬಂಧಗಳ ಉಲ್ಲಂಘನೆ ಅಥವಾ ಅಸಂಗತವಾಗಿದ್ದಲ್ಲಿ, ಅಂತಹ ನಿರ್ಣಯಗಳನ್ನು ತಾಲ್ಲೂಕು ಪಂಚಾಯತಿಯ ಗಮನಕ್ಕೆ ತರುವುದು. ಆದರೂ ತಾಲ್ಲೂಕು ಪಂಚಾಯತಿ ಸದರಿ ಅಸಂಗತತೆಯನ್ನು ಪರಿಹರಿಸದಿದ್ದಲ್ಲಿ, ಕಾರ್ಯನಿರ್ವಹಣ ಅಧಿಕಾರಿ ಸದರಿ ನಿರ್ಣಯದ ಪ್ರತಿಯನ್ನು ತನ್ನ ಲಿಖಿತ ಟಿಪ್ಪಣಿಯೊಂದಿಗೆ ಅಧ್ಯಕ್ಷನಿಗೆ ತಿಳಿಸಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸುವುದು ಆತನ ಕರ್ತವ್ಯವಾಗಿರುತ್ತದೆ.

ಆ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೆ, ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿಯು ತಾಲ್ಲೂಕು ಪಂಚಾಯಿತಿಗಳು ಮಾಡಿದ ನಿರ್ಣಯವನ್ನು ಉಲ್ಲಂಘನೆ ಮಾಡಬಹುದೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಸಮಂಜಸವಾಗಿಲ್ಲ. ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಕಳೆದ ಜನವರಿ ತಿಂಗಳಿನಲ್ಲಿ ತಾಲ್ಲೂಕು ಪಂಚಾಯಿತಿಯಲ್ಲಿ ಒಂದು ನಿರ್ಣಯವಾಯಿತು. ಆದು ಏನೆಂದರೆ ವಡ್ಡರಳ್ಳಿ ಎಂಬ ಗ್ರಾಮದಲ್ಲಿರುವ ಶಂಕುಚಕ್ರ ಯುವಕೆ ಸಂಘವನ್ನು ರಿನ್ಯುವಲ್ ಮಾಡಬೇಕೆಂದು ಪಂಚಾಯಿತಿಯಲ್ಲಿ ನಿರ್ಣಯವಾಯಿತು. ಆ ನಿರ್ಣಯವನ್ನು ಕಾರ್ಯನಿರ್ವಾಹಣಾಧಿಕಾರಿಯವರು ಏತಕ್ಕೆ ಉಲ್ಲಂಘನೆ ಮಾಡಿದ್ದಾರೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು. ತಾಲ್ಲೂಕು ಪಂಚಾಯಿತಿ ಮಾಡಿದ ನಿರ್ಣಯವನ್ನು ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿ ಏತಕ್ಕೆ ಕಾರ್ಯಗತ ಮಾಡಿಲ್ಲ, ಅದಕ್ಕೆ ಕಾರಣವೇನು ಎಂದು ನಾನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, 1993ರಲ್ಲಿ ನಾವು ಅಧಿಕಾರದಲ್ಲಿದ್ದಾಗ ಮಾಡಿದ್ದ ಕಾನೂನಿನ ಪ್ರಕಾರ ಏನಾದರೂ ಅಕ್ರಮ, ಕಾನೂನಿನ ವಿರುದ್ಧವಾಗಿ ಅಲ್ಲಿ ಕೆಲಸ ನಡೆಯುತ್ತಿದ್ದರೆ ಆಗ ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿಯು ಈ ವಿಷಯವನ್ನು ಅಧ್ಯಕ್ಷರ ಗಮನಕ್ಕೆ ತರಬೇಕು ಎಂದು ಮಾತ್ರ ಇತ್ತು. ಅನಂತರ 1997ರಲ್ಲಿ ಏನು ತಿದ್ದುಪಡಿಗಳನ್ನು ಆಗಿದ್ದ ಸರ್ಕಾರ ಮಾಡಿತು ಅದರಂತೆ ಅಧಿಕಾರಿಗಳ ಜವಾಬ್ದಾರಿಯನ್ನು ಜಾಸ್ತಿ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಟೀಕೆ ಏನೂ ಮಾಡುತ್ತಿಲ್ಲ. 1997ರಲ್ಲಿ ತಿದ್ದುಪಡಿ ಮಾಡಿ ಏನು ಮಾಡದ್ದಾರೆಂದರೆ ತಾಲ್ಲೂಕು ಮಟ್ಟಕ್ಕೆ ತಾಲ್ಲೂಕು ಪಂಚಾಯಿತಿಯಾಗಲಿ, ಅಧ್ಯಕ್ಷರಾಗಲಿ ಕಾನೂನಿಗೆ ವಿರುದ್ಧವಾಗಿ ಏನಾದರೂ ಮಾಡಿದ್ದರೆ ಆಗ ಈ ಕಾರ್ಯನಿರ್ವಾಹಣಾಧಿಕಾರಿ ಸುಮ್ಮನೆ ಇರಬೇಕಾಗಿಲ್ಲ, ಅವರಿಗೆ ಜವಾಬ್ದಾರಿಯಿದೆ ಯಾವ ಕಾರಣಕ್ಕಾಗಿ ಇದು ಕಾನೂನಿಗೆ ವಿರುದ್ಧವಾಗಿದೆಯೆಂದು ಸಿ.ಇ.ಒ.ರವರಿಗೆ ಲಿಖಿತ ಮೂಲಕವಾಗಿ ತಿಳಿಸಬೇಕಾಗುತ್ತದೆ. ಅಷ್ಟು ಮಾಡದಿದ್ದರೆ ಈ ಕಾರ್ಯನಿರ್ವಾಹಣಾಧಿಕಾರಿಯು ತಾನು ಮಾಡಿದ ತಪ್ಪಿಗೆ ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಶ್ರೀ ಎ. ಮಂಜು : ತಾಲ್ಲೂಕು ಪಂಚಾಯಿತಿ ಮಾಡಿದ್ದ ನಿರ್ಣಯವನ್ನು ಜಾರಿ ಮಾಡಿದಿದ್ದ ಬಗ್ಗೆ ಅವರು ಸಿ.ಇ.ಒ. ರವರಿಗೆ ಲಿಖಿತ ಮೂಲಕವಾಗಿ ತಿಳಿಸಬೇಕು ಎಂಬುದಾಗಿ ತಾವು ಹೇಳಿದ್ದೀರಿ. ಇವೆಲ್ಲ ಆದರೂ ಸಹ ಅಧ್ಯಕ್ಷರಿಗೆ ಕೂಡ ಕಾಗದ ಬರೆದಿದ್ದಾರೆ, ಪ್ರತಿಯೊಬ್ಬರಿಗೂ ಸಹ ತಿಳಿಸಿದ್ದಾರೆ, ತೀರ್ಮಾನವಾದ ನಿರ್ಣಯವನ್ನು ಉಲ್ಲಂಘನೆ ಮಾಡುವಂಥದ್ದು ಆ್ಯಕ್ಟ್‌ನಲ್ಲಿ ಇಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ತಾವು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 156 (2) ಮತ್ತು (3)ರ ಬಗ್ಗೆ ತಿಳಿಸಿದ್ದೀರಿ.

ಶ್ರೀ ಎಂ.ವೈ. ಘೋರ್ಪಡೆ : ಆ ಅಧ್ಯಕ್ಷರ ಆದೇಶವಾಗಲಿ, ರೆಸಲ್ಯೂಷನ್ ಆಗಲಿ ಅದು ಕಾನೂನಿಗೆ ವಿರುದ್ಧವಾಗಿದೆ ಎಂದರೆ ಈ ಕೆಲಸ ಮಾಡಲು ಅವಕಾಶ ಇದೆ, ತಮ್ಮ ಸರ್ಕಾರ ಅಧಿಕಾರಧಲ್ಲಿ ಇದ್ದಾಗ ಇದರಲ್ಲಿ ಮಾರ್ಪಾಟನ್ನು ಮಾಡಿದ್ದಾರೆ. ಅದನ್ನು ಓದಿದರೆ ತಮಗೆ ಉಪಯೋಗವಾಗುತ್ತದೆ.

"If, in the opinion of the Executive Officer, any proposal or resolution before the taluk Panchayat or any committee or any order of the Adhyaksha is violative of or inconsistent with the provisions of this Act, or any other law or rule or order made thereunder or any financial resolution of budget provision is in derogation of the functions of the Taluk Panchayat or its committee or Adhyaksha, it shall be the duty of the Executive Officer to advise the Taluk Panchayat or the committee or the Adhyaksha in the form of a written note containng the reasons for his opinion and specifying the law, rule order, regulation or the provisions with which the proposal resolution

or order is inconsistent and if the proposal or the resolution or the order has been considered and passed by the Taluk Panchayat or the committee or the Adhyaksha before such advice is tendered, the Executive Officer may re-submit the proposal or resolution or order which he has advised after such examination and considered necessary. He may forward it to the Chief Executive Officer under the intimation to the Adhyaksha.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ತಾಲ್ಲೂಕು ಪಂಚಾಯಿತಿಯ ಕಾನೂನು ಬದ್ಧವಾದಂತಹ ರೆಸಲ್ಯೂಷನ್ ಅನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ತಿರಸ್ಕಾರ ಮಾಡಬಹುದೇ? ಒಂದು ವೇಳೆ ತಿರಸ್ಕಾರ ಮಾಡಿದರೆ ಅದಕ್ಕೆ ಪನಿಷ್‌ಮೆಂಟ್ ಏನು ಎಂಬ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ರೆಸಲ್ಯೂಷನ್ ತಪ್ಪಾದರೆ ಏನು ಮಾಡಬೇಕು ಎನ್ನುವುದರ ಬಗ್ಗೆ ಇಲ್ಲಿ ಮಾನ್ಯ ಮಂತ್ರಿಗಳು ವಿವರಣೆ ಕೊಟ್ಟಿದ್ದಾರೆ. ಬಹುಶಃ ಅದು ತಪ್ಪಾಗಿದೆ. ಕಾನೂನು ಬದ್ಧವಾಗಿರತಕ್ಕಂತಹ ರೆಸಲ್ಯೂಷನ್ ಅನ್ನು ಎಗ್ಸಿಕ್ಯೂಷನ್ ಮಾಡುವುದರಲ್ಲಿ ತಪ್ಪಿತಸ್ಥನಾದರೆ ಕಾರ್ಯನಿರ್ವಾಹಣ ಅಧಿಕಾರಿಗೆ ಏನು ಪನಿಷ್‌ಮೆಂಟ್ ಕೊಡಬಹುದು ಎಂಬುದು ಮಾನ್ಯ ಸದಸ್ಯರ ಮೂಲಭೂತವಾದಂತಹ ಪ್ರಶ್ನೆಯಾಗಿದೆ. ಅದಕ್ಕೆ ಮಾನ್ಯ ಮಂತ್ರಿಗಳು ಸಮಂಜಸವಾದ ಉತ್ತರವನ್ನು ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಈಗಿರತಕ್ಕಂತಹ ಕಾನೂನಿನ ಪ್ರಕಾರ ಎಗ್ಸಿಕ್ಯುಟಿವ್ ಆಫೀಸರ್‌ಗೆ ಏನಾದರೂ ತಪ್ಪಾಗಿದೆ, ಕಾನೂನು ವಿರುದ್ಧವಾಗಿ ಈ ಕೆಲಸ ನಡೆದಿದೆ ಎಂದು ಅನ್ನಿಸಿದರೆ, ಅದನ್ನು ಅಧ್ಯಕ್ಷರಿಗೆ ತಿಳಿಸುವುದು ಅವರ ಜವಾಬ್ದಾರಿಯಾಗಿದೆ ಅವರು ಸರಿಪಡಿಸಿಕೊಂಡರೆ ಸರಿ, ಇಲ್ಲದಿದ್ದರೆ ಚೀಫ್ ಎಗ್ಸಿಕ್ಯೂಟಿವ್ ಆಫೀಸರ್‌ಗೆ ಅವರು ಕಾನೂನಿಗೆ ತದ್ವಿರುದ್ಧವಾದಂತಹದ್ದು ನಡೆಯುತ್ತಿದೆ ಎಂದು ರಿಪೋರ್ಟ್ ಮಾಡಬೇಕಾಗುತ್ತದೆ. ಇದು ಪಂಚಾಯಿತಿ ಮಟ್ಟಕ್ಕೆ ಅನ್ವಯಿಸುತ್ತದೆ. ಜಿಲ್ಲಾ ಮಟ್ಟದಲ್ಲಿ ಅಂತಹದ್ದೇ ತಪ್ಪಾದರೆ ಆ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಆ ಬಗ್ಗೆ ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ 15 ದಿನಗಳಲ್ಲಿ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ಏನು ರೆಸಲ್ಯೂಷನ್ ಅನ್ನು ಮಾಡಿರುತ್ತಾರೋ ಅದು ಅನುಷ್ಠಾನಕ್ಕೆ ಬರುತ್ತದೆ.

1994ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ

1129 - ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾಥಮಿಕ 1ನೇ ತರಗತಿಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? 2 ರಿಂದ 7ನೇ ತರಗತಿಯಲ್ಲಿದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಸರ್ಕಾರಿ ಹಾಗೂ ಖಾಸಗಿ ಪ್ರತ್ಯೇಕ ಮಾಹಿತಿ ನೀಡುವುದು)*